ಇ) ಅಗತ್ಯವಿರುವ ಉಪಕರಣಗಳು ಮತ್ತು ಸಿಬ್ಬಂದಿ ವ್ಯವಸ್ಥೆ ಹಾಗೂ ಈಗಿನ ಪರಿಸ್ಥಿತಿಯ ಬಗ್ಗೆ ವಿವರಗಳೇನು ,

ಈ) ಒಂದು ವೇಳೆ ಅಗತ್ಯ ಉಪಕರಣ ಮತ್ತು ವಾಹನಗಳನ್ನು ಮಾತ್ರವಲ್ಲದೆ, ಅಗತ್ಯ ಸಿಬ್ಬಂದಿ ವರ್ಗದವರನ್ನು ಇದುವರೆವಿಗೂ ನಿಯೋಜನೆ ಮಾಡದಿದ್ದಲ್ಲಿ, ಸಾರ್ವಜನಿಕರ ಹಿತದೃಷ್ಟಿಯಿಂದ ಇವುಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಸವಕಲ್ಯಾಣ ರಕ್ತನಿಧಿ ಸಂಗ್ರಹಣೆಗಾಗಿ ಇಲ್ಲಿಯವರೆಗೆ ಯಾವುದೇ ತರಹದ ಉಪಕರಣಗಳು ಹಾಗೂ ವಾಹನಗಳು ಸರಬರಾಜು ಆಗಿರುವುದಿಲ್ಲ

ಆ) ರಕ್ತನಿಧಿ ಸಂಗ್ರಹಣೆಯಡಿಯಲ್ಲಿ ಇಲ್ಲಿಯವರೆಗೆ ಸಿಬ್ಬಂದಿಯು ಮಂಜೂರಾತಿಯಾಗಿರುವುದಿಲ್ಲ ಸಾರ್ವಜನಿಕ ಆಸ್ಪತ್ರೆ ಬಸವಕಲ್ಯಾಣದಲ್ಲಿ ಒಟ್ಟು 108 ಸಿಬ್ಬಂದಿ ವರ್ಗ ಮಂಜೂರಾಗಿದ್ದು ಇದರಲ್ಲಿ 52 ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ

ಇ) ರಕ್ತನಿಧಿ ಸಂಗ್ರಹಣೆಯಲ್ಲಿ ಯಾವುದೇ ತರಹದ ಉಪಕರಣಗಳು ಹಾಗೂ ಸಿಬ್ಬಂದಿ ವ್ಯವಸ್ಥೆ ಇರುವುದಿಲ್ಲ

ಈ) ಹಣಕಾಸಿನ ಲಭ್ಯತೆ ಆಧರಿಸಿ ಕ್ರಮ ಕೈಗೊಳ್ಳಲಾಗುತ್ತದೆ

85 (173) ಶ್ರೀ ಮಲ್ಲಿಕಾರ್ಜುನ್‌ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ನಮಾಜ ಕಲ್ಯಾಣ, ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ಇರುವ ಮೊರಾರ್ಜಿ ವಸತಿ ಶಾಲೆಗಳು ಮತ್ತು ಆಶ್ರಮ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಇವು ಯಾವ ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ,

ಆ) ಇವುಗಳಿಗೆ ಮಂಜೂರಾತಿ ನೀಡಿದ್ದು ಯಾವಾಗ ಹಾಗೂ ಈ ವಸತಿ ಶಾಲೆಗಳಿಗೆ ಹಾಗೂ ಆಶ್ರಮ ಶಾಲೆಗಳಿಗೆ ಯಾವ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ ,

ಇ) ಈ ಶಾಲೆಗಳಿಗೆ ಯಾವ ಯಾವ ಮೂಲಭೂತ ಸೌಕರ್ಯಗಳ ಕೊರತೆ ಇದೆ ,

ಈ) ಕೊರತೆಗಳನ್ನು ನೀಗಿಸಲು ಸರ್ಕಾರದ ಮುಂದಿರುವ ಕ್ರಮಗಳೇನು ,

ಉ) ಈ ಶಾಲೆಗಳ ಮಂಜೂರಾತಿಯಿಂದ ಇಲ್ಲಿಯವರೆವಿಗೆ ಮಂಜೂರಾದ, ಬಿಡುಗಡೆಯಾದ ಮತ್ತು ಖರ್ಚಾದ ಹಣದ ಮೊತ್ತವೆಷ್ಟು , (ವರ್ಷವಾರು ಮತ್ತು ಶಾಲೆವಾರು ವಿವರಗಳನ್ನು ಒದಗಿಸುವುದು) ,

(ಋ) ಈ ಪ್ರಸಕ್ತ ಸಾಲಿನಲ್ಲಿ ಈ ಮತಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ವಸತಿ ಶಾಲೆ ಮತ್ತು ಆಶ್ರಮ ಶಾಲೆಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಬಸವ ಕಲ್ಯಾಣ ಮತ ಕ್ಷೇತ್ರದಲ್ಲಿನ ಬೆಟ್ಟ ಬಾಲಕುಂದ ಶಿಕ್ಷಣ ಇಲಾಖೆ (ಸಾಮಾನ್ಯ) ಒಂದು ಮತ್ತು ನವ್ತಾಮರ ಬಂಗ್ಲಾದಲ್ಲಿ (ಪರಿಶಿಷ್ಟ ಜಾತಿ) ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿದೆ, ಘೋಮವಾಡಿ ಗ್ರಾಮದಲ್ಲಿ ಒಂದು ಆಶ್ರಮ ಶಾಲೆ ಕಾರ್ಯ ನಿರ್ವಹಿಸುತ್ತಿರುತ್ತದೆ

ಆ) ಶಿಕ್ಷಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ, 1995–96ನೇ ಸಾಲಿನಲ್ಲಿ ಮಂಜೂರಾಗದೆ ಪರಿಶಿಷ್ಟ ಜಾತಿ ವಸತಿ ಶಾಲೆಯು 2005–06ನೇ ಸಾಲಿನಲ್ಲಿ ಮಂಜೂರಾಗಿದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶಾಲಾ ಕಟ್ಟಡ, ಸಿಬ್ಬಂದಿಗಳ ವಸತಿ ಗೃಹಗಳು ಹಾಗೂ ಭೋಜನಾ ಶಾಲೆ ನಿರ್ಮಿಸಲಾಗಿದೆ ಪರಿಶಿಷ್ಟ ಜಾತಿ, ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ ವಿದ್ಯಾರ್ಥಿಗಳಿಗೆ ನೀಡಬೇಕಾದ ಪರ್ಯಮನ್ತಕಗಳು, ಸಮವನ್ತ್ರ, ಡೆಸ್ಕ್, ಹಾಸಿಗೆ ಹೊದಿಕೆಗಳು ಇತ್ಯಾದಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ

ಆಶ್ರಮ ಶಾಲೆಯನ್ನು 2001–02ನೇ ಸಾಲಿನಲ್ಲಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ ಸದರಿ ಆಶ್ರಮ ಶಾಲೆಯು 125 ವಿದ್ಯಾರ್ಥಿಗಳ ನಂಖ್ಯಾಬಲ ವುಳ್ಳದಿರುತ್ತದೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ರೂ 91 02 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಟ್ಟಡದ ಕಾಮಗಾರಿಯು ಅಂತಿಮ ಹಂತದಲ್ಲಿರುತ್ತದೆ ಆಶ್ರಮ ಶಾಲೆಯಲ್ಲಿ ಭೋದನಾ ಕೊರಡಿಗಳಲ್ಲದೇ ಲ್ಯಾಬೋರೇಟರಿ, ಕಂಪ್ಯೂಟರ್ ಕೊರಡಿ, ಶಿಕ್ಷಕರ ಕೊರಡಿಗಳನ್ನು ಒಳಗೊಂಡಿರುತ್ತದೆ ಅಲ್ಲದೆ, ಶೌಚಾಲಯ, ಸ್ನಾನಗೃಹ ಮುಂತಾದ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ನಿಲಯ ಮತ್ತು ಸಿಬ್ಬಂದಿ ಕ್ವಾರ್ಟರ್ಸ್ ನಹ ನಿರ್ಮಿಸಲಾಗುತ್ತಿದೆ

ಇ) ಶಿಕ್ಷಣ ಇಲಾಖೆಯ ಬೆಟ್ಟ ಬಾಲಕುಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳ ವಸತಿ ಗೃಹಗಳನ್ನು ನಿರ್ಮಾಣ ಮಾಡಬೇಕಾಗಿದೆ

ನವ್ತಾಮರ ಬಂಗ್ಲಾ (ಬಸವ ಕಲ್ಯಾಣ) ಪರಿಶಿಷ್ಟ ಜಾತಿ ವಸತಿ ಶಾಲೆಗೆ ನಿವೇಶನಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ

ವಿದ್ಯಾರ್ಥಿಗಳಿಗೆ ವಿದ್ಯಾಭಾನಕ್ಕೆ ಅಗತ್ಯವಾದ ಸೌಕರ್ಯ ನೀಡಲಾಗಿದೆ ಹೊಸದಾಗಿ ನಿರ್ಮಿಸಲಾಗುತ್ತಿರುವ ಕಟ್ಟಡಕ್ಕೆ ನೀರಿನ ಮತ್ತು ವಿದ್ಯುತ್ ಸಂವರ್ಕ ವ್ಯವಸ್ಥೆ ಕಲ್ಪಿಸಬೇಕಾಗಿದೆ

ಶಿಕ್ಷಣ ಇಲಾಖೆಯ ಬೆಟ್ಟಬಾಲಕುಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳ ವಸತಿ ಗೃಹಗಳನ್ನು ನಿರ್ಮಾಣಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಮುಂದಿನ ಕ್ರಮ ಕೈಗೊಂಡಿದೆ

ನವ್ತಾಮರದ ಬಂಗ್ಲಾ (ಬನವಕಲ್ಯಾಣ) ವರಿಶಿಷ್ಟ ಜಾತಿ ವಸತಿ ಶಾಲೆಗೆ ನಿವೇಶನ ಲಭ್ಯವಾದ ನಂತರ ಶಾಲಾ ನಂಕೀರ್ಣ ನಿರ್ಮಾಣ ಮಾಡಲಾಗುವುದು

ಕುಡಿಯುವ ನೀರಿನ ಮತ್ತು ವಿದ್ಯುತ್ ಸಂಪರ್ಕ ವ್ಯವಸ್ಥೆ ಕಲ್ಪಿಸಲು ಅನುದಾನದ ಕೊರತೆಯಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಜಿಲ್ಲಾವಲಯದಲ್ಲಿನ ಅನುದಾನದಲ್ಲಿ ಕ್ರಮ ಕೈಗೊಳ್ಳಲಾಗುವುದು

ಉ) ವಸತಿ ಶಾಲೆಗಳಿಗೆ ಪ್ರಸಕ್ತ ಸಾಲಿಗೆ ನಿಗದಿವಡಿಸಿದ ಬಿಡುಗಡೆ ಹಾಗೂ ಖರ್ಚಿನ ಅನುದಾನದ ವಿವರ ಕೆಳಕಂಡಂತಿದೆ

ವಸತಿ ಶಾಲೆಯ ಹೆಸರು	ನಿಗದಿ ವಡಿಸಿದ ಅನುದಾನ	ಬಿಡುಗಡೆ	ಖರ್ಚು
ಬೆಟ್ಟಬಾಲಕುಂದ (ಬನವಕಲ್ಯಾಣ)	48 48	36 36	24 12
ನವ್ತಾಮರ ಬಂಗ್ಲಾ (ಬನವಕಲ್ಯಾಣ)	25 00	17 00	4 25

ಆಶ್ರಮ ಶಾಲೆಗೆ ಈ ಕಳಕಂಡಂತೆ ಅನುದಾನ ಬಿಡುಗಡೆ ಆಗಿ ಖರ್ಚಾಗಿರುತ್ತದೆ

ವರ್ಷ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಉಳಿಕೆ
2001–02	0 88	0 88	--
2002–03	5 98	2 90	3 08
2003–04	2 45	2 45	--
2004–05	3 50	3 26	0 24
2005–06	2 91	2 90	0 01
2006–07 ಡಿಸೆಂಬರ್ ಅಂತ್ಯಕ್ಕೆ	1 57	1 57	--

ಊ) ಬೇಡಿಕೆ ಮತ್ತು ಆಯವ್ಯಯದಲ್ಲಿನ ಅನುದಾನದ ಲಭ್ಯತೆ ಅನುಸರಿಸಿ ನಿರ್ಧರಿಸಲಾಗುವುದು

86 (174) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬನವಕಲ್ಯಾಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವ ಕಲ್ಯಾಣ ಮತಕ್ಷೇತ್ರದಲ್ಲಿ ಇರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ವಿವಿಧ ವರ್ಗಗಳ ವಿದ್ಯಾರ್ಥಿ ವಸತಿ ನಿಲಯಗಳಾವುವು ,